# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಚಿಕ್ಕಬಳ್ಳಾಪುರ

## Spl. CASE: 19/2022

**ಪ್ರಾ.ಸಾ. 07**
**ದೋ.ಸಾ. 13**

| | | |
|---|---|---|
| ಸಾಕ್ಷಿಯ ಹೆಸರು | : | ನರೇಶ್ ನಾಯಕ್ |
| ತಂದೆಯ ಹೆಸರು | : | ಸೇವಾಲಾಲ್ |
| ವಯಸ್ಸು | : | 39 ವರ್ಷ |
| ಉದ್ಯೋಗ | : | ಪಿ ಐ, ಜಿಲ್ಲಾ ಪೊಲೀಸ್ ಕಛೇರಿ ಚಿಕ್ಕಬಳ್ಳಾಪುರ |
| ವಾಸ | : | ಚಿಕ್ಕಬಳ್ಳಾಪುರ |

**ದಿನಾಂಕ 10-02-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ**

ನಾನು ಅಕ್ಟೋಬರ್ 2019 ರಿಂದ ಜುಲೈ 2021 ರವರೆಗೆ ನಾನು ಚಿಂತಾಮಣಿ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪಿ ಎಸ್ ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿಃ 28.06.2021 ರಂದು ಈ ಪ್ರಕರಣದ ಕಡತವನ್ನು ಚಾಸಾ -12 ಎ.ಎಸ್.ಐ-ಸುಬ್ರಮಣಿ ರವರಿಂದ ಸ್ವೀಕರಿಸಿ ಅಲ್ಲಿಯವರೆಗೆ ಆದ ತನಿಖೆಯನ್ನು ಪರಿಶೀಲಿಸಿರುತ್ತೇನೆ. ನಂತರ ಅದೇ ದಿನ ಪಂಚನಾಮೆಯ ಕಾಲದಲ್ಲಿ ಅಮಾನತ್ತು ಪಡಿಸಿದ ಗಾಂಜಾ ಮಾಲನ್ನು ಸ್ವೀಕರಿಸಿ ಠಾಣಾ ಪಿ .ಎಫ್ ಸಂಖ್ಯೆ 216/2021 ರಲ್ಲಿ

ನಮೂದಿಸಿ ನ್ಯಾಯಾಲಯಕ್ಕೆ ನಿವೇಧಿಸಿಕೊಂಡಿರುತ್ತೇನೆ. ನಂತರ ಸ್ವೀಕರಿಸಿದ ಮಾಲಿನ ಇನ್ವೆಂಟರಿಯನ್ನು ಸೇರಿಸಿರುತ್ತೇನೆ. ಅದೇ ದಿನ ಪ್ರಾಸಾ-1 ಆರ್ ಐ ಗೋಕುಲ್ ಹಾಗೂ ಚಾಸಾ -3 ಮಧುಕರ್-ಸೆಕ್ರೆಟರಿ , ಚಾಸಾ-4 ನಾಗವೇಣಿ ವಿ. ಎ. ಹಾಗೂ ಪ್ರಾಸಾ-3 ಚಂದ್ರಶೇಖರ್, ಚಾಸಾ-8 ರಿಂದ ಚಾಸಾ-10 ರವರ ಹೇಳಿಕೆಯನ್ನು ದಾಖಲಿಸಿಕೊಂಡಿರುತ್ತೇನೆ.

3. ದಿ.29.06.2021 ರಂದು ಅಮಾನತ್ತು ಪಡಿಸಿಕೊಂಡಿದ್ದ ಮಾಲಿನ Correctness Certificate ಪಡೆದುಕೊಳ್ಳಲು ಮಾನ್ಯ ವಿಶೇಷ ನ್ಯಾಯಾಲಯದ ಮುಂದೆ ಅರ್ಜಿ ಸಲ್ಲಿಸಿ, ದಿಃ 30.06.2021 ರಂದು ನ್ಯಾಯಾಲಯದ ಆದೇಶವನ್ನು ಪಡೆದುಕೊಂಡಿರುತ್ತೇನೆ. ಸಾಕ್ಷಿ ಸದರಿ ಮನವಿ ಹಾಗೂ ನ್ಯಾಯಾಲಯದ ಆದೇಶವನ್ನು ನೋಡಿ ಗುರುತಿಸಿದ ಮೇರೆಗೆ ಅವುಗಳನ್ನು ಒಟ್ಟಾರೆಯಾಗಿ **ನಿಪಿ-10** ಎಂದು ಹಾಗೂ ಸಾಕ್ಷಿಯ ಸಹಿಯನ್ನು **ನಿಪಿ-10(ಎ)** ಎಂದು ಗುರುತಿಸಲಾಯಿತು.

4. ಅದರಂತೆ ಚಿಂತಾಮಣಿ ನ್ಯಾಯಾಧೀಶರ ಮುಂದೆ ದಿನಾಂಕ 03.07.2021 ರಂದು ಅಮಾನತ್ತು ಪಡಿಸಿದ ಮಾಲನ್ನು ಇನ್ವೆಂಟರಿಯೊಂದಿಗೆ ಹಾಜರುಪಡಿಸಿ Correctness Certificate ಅನ್ನು ಪಡೆದುಕೊಂಡಿರುತ್ತೇನೆ. ಸಾಕ್ಷಿಯು Annexure-1, Annexure-2, Correctness certificate ಅನ್ನು ನೋಡಿ ಗುರುತಿಸಿದ ಮೇರೆಗೆ ಅವುಗಳನ್ನು ಒಟ್ಟಾರೆಯಾಗಿ **ನಿಪಿ-11** ಎಂದು ಹಾಗೂ ಅದರ ಮೇಲಿರುವ ಸಾಕ್ಷಿಯ ಸಹಿಯನ್ನು **ನಿಪಿ-11(ಎ)** ಎಂದು

ಗುರುತಿಸಲಾಯಿತು. ಆ ಕಾಲಕ್ಕೆ ಎಪ್ ಎಸ್ ಎಲ್ ಗೆ ಕಳುಹಿಸುವ ಸಲುವಾಗಿ 50 ಗ್ರಾಂ ಗಾಂಜಾವನ್ನು ಬೇರ್ಪಡಿಸಿ ಪ್ರತ್ಯೇಕವಾಗಿ ಸಂಗ್ರಹಿಸಲಾಗಿರುತ್ತದೆ. ನಂತರ ಎರಡೂ ಬಗೆಯ ಗಾಂಜಾ ಪ್ಯಾಕೇಟ್‌ಗಳನ್ನು ಮುಂದಿನ ಕ್ರಮಕ್ಕಾಗಿ ಪ್ರತ್ಯೇಕವಾಗಿ ಪ್ಯಾಕ್ ಮಾಡಿ CJ ಎಂಬವ ಅಕ್ಷರದಿಂದ ಸೀಲ್ ಮಾಡಿ ನಮ್ಮ ವಶಕ್ಕೆ ಪಡೆಯಲಾಯಿತು. ಅದೇ ಕಾಲಕ್ಕೆ ಭಾವ ಚಿತ್ರಗಳನ್ನು ಸಹ ತೆಗೆದಿರುತ್ತೇನೆ. ಸಾಕ್ಷಿಯು ಸದರಿ 4 ಪೊಟೋಗಳನ್ನು ನೋಡಿ ಗುರುತಿಸಿದ ಮೇರೆಗೆ ಅವುಗಳನ್ನು **ನಿಪಿ–12** ಎಂದು ಗುರುತಿಸಲಾಯಿತು. ಸದರಿ ಫೋಟೊಗಳನ್ನು ನಮ್ಮ ಮಹಿಳಾ ಪೇದೆ 479 ರೇಖಾ ರವರು ತಮ್ಮ ಮೊಬೈಲ್ ನಲ್ಲಿ ತೆಗೆದಿದ್ದು, ಈ ಬಗ್ಗೆ 65(ಬಿ) ರ ಪ್ರಮಾಣ ಪತ್ರವನ್ನು ನೀಡಿರುತ್ತಾರೆ. ಸಾಕ್ಷಿ ಸದರಿ ಪ್ರಮಾಣ ಪತ್ರವನ್ನು ನೋಡಿ ಗುರುತಿಸಿದ ಮೇರೆಗೆ ಅದನ್ನು **ನಿಪಿ–13** ಎಂದು, ಸಾಕ್ಷಿಯ ಸಹಿಯನ್ನು **ನಿಪಿ–13 (ಎ),** ಎಂದು ಹಾಗೂ ಮಹಿಳಾ ಪೇದೆ ಸಹಿಯನ್ನು ರವರ ಸಹಿಯನ್ನು **ನಿಪಿ–13 (ಬಿ)** ಎಂದು ಗುರುತಿಸಲಾಯಿತು. ಮಾದರಿ ಗಾಂಜಾ ಪ್ಯಾಕೇಟ್ ಅನ್ನು ಠಾಣಾ ಮಾಲು ಪಟ್ಟಿ ಸಂಖ್ಯೆ 219/2021 ರಲ್ಲಿ ಅಳವಡಿಸಿ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ಸಾಕ್ಷಿ ಮಾದರಿಗಾಗಿ ಸಂಗ್ರಹಿಸಿದ ಮಾದರಿ ಗಾಂಜಾ ಪ್ಯಾಕೇಟ್ ಅನ್ನು ನೋಡಿ ಗುರುತಿಸಿದ್ದು , ಅದನ್ನು ಈಗಾಗಲೇ ಮು.ಮಾ.2 ಎಂದು ಗುರುತಿಸಲಾಗಿದೆ.

5. ದಿ.04.07.2021 ರಂದು ಎಫ್.ಎಸ್ ಎಲ್ ಗಾಗಿ ಅಮಾನತ್ತು ಪಡಿಸಿಕೊಂಡಿದ್ದ ಮಾಲನ್ನು ಹೆಚ್‌ಸಿ 54–ವೆಂಕಟರಮಣಪ್ಪ ರವರ ಮೂಲಕ ಸಮುಚ್ಚಿತ

ಮಾರ್ಗದಲ್ಲಿ ಎಫ್ .ಎಸ್.ಎಲ್ ಪರೀಕ್ಷೆಗಾಗಿ ಕಳುಹಿಸಿಕೊಟ್ಟಿದ್ದು , ಸದರಿಯವರು ಮಾಲನ್ನು ಎಫ್.ಎಸ್ ಎಲ್ ಗೆ ಹಾಜರು ಪಡಿಸಿ, ಎಫ್.ಎಸ್ ಎಲ್ ರವರು ನೀಡಿದ ಸ್ವೀಕೃತಿಯನ್ನು ತಂದು ಠಾಣೆಯಲ್ಲಿ ಹಾಜರು ಮಾಡಿದ್ದು, ಅದನ್ನು ಸ್ವೀಕರಿಸಿ ಕಡತದಲ್ಲಿ ಹಾಜರುಪಡಿಸಿರುತ್ತೇನೆ. ಸಾಕ್ಷಿ ಸದರಿ ದಾಖಲೆಯನ್ನು ನೋಡಿ ಗುರುತಿಸಿದ ಮೇರೆಗೆ ಅದನ್ನು **ನಿಪಿ–14** ಎಂದು, ಸಾಕ್ಷಿಯ ಸಹಿಯನ್ನು **ನಿಪಿ–14(ಎ)** ಗುರುತಿಸಲಾಯಿತು.

6. ದಿ.15.07.2021 ರಂದು ಪ್ರಕರಣದಲ್ಲಿ FSL ಕಳುಹಿಸಿದ ಮಾದರಿಯನ್ನು ಹೊರತುಪಡಿಸಿ ಉಳಿದ ಗಾಂಜಾವನ್ನು ವಿಲೇವಾರಿ ಮಾಡುವ ಸಲುವಾಗಿ ನ್ಯಾಯಾಲಯದ ಆದೇಶ ಪಡೆಯಲು ಮಾನ್ಯ ಜಿಲ್ಲಾ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿ ದಿ.17.07.2021 ರಂದು ಅನುಮತಿಯನ್ನು ಪಡೆದುಕೊಂಡಿರುತ್ತೇನೆ. ಸಾಕ್ಷಿ ಸದರಿ ದಾಖಲೆಗಳನ್ನು ನೋಡಿ ಗುರುತಿಸಿದ ಮೇರೆಗೆ ಅವುಗಳನ್ನು ಒಟ್ಟಾರೆಯಾಗಿ **ನಿಪಿ–15** ಎಂದು ಸಾಕ್ಷಿಯ ಸಹಿಯನ್ನು **ನಿಪಿ–15(ಎ)** ಎಂದು ಗುರುತಿಸಲಾಯಿತು.

7. ಮೇಲಿನ ಆದೇಶದಂತೆ ದಿ.20.07.2021 ರಂದು WPC 284 ರವರ ಮೂಲಕ ನಮ್ಮ ಬಳಿ ಉಳಿದಿದ್ದ ಗಾಂಜಾವನ್ನು ಮಾನ್ಯ ಪೊಲೀಸ್ ಉಪ ಅಧೀಕ್ಷಕರು ಜಿಲ್ಲಾ ಸಶಸ್ತ್ರ ಮೀಸಲು ಪಡೆ ರವರ ವಶಕ್ಕೆ ವಹಿಸಿಕೊಟ್ಟಿರುತ್ತೇನೆ. ಸಾಕ್ಷಿ ಮನವಿ ಪತ್ರ ಹಾಗೂ ಅದರ ಮೇಲೆ ಜಿಲ್ಲಾ ಸಶಸ್ತ್ರ ಮೀಸಲು ಪಡೆಯವರು ಸ್ವೀಕರಿಸಿ ಸೀಲ್ ಹಾಕಿರುವ ದಾಖಲೆಯ ದೃಢೀಕೃತ ಪತ್ರವನ್ನು ನೀಡಿದ್ದು ಅದನ್ನು ನೋಡಿ ಗುರುತಿಸಿದ ಮೇರೆಗೆ ಅವುಗಳನ್ನು ಒಟ್ಟಾರೆಯಾಗಿ **ನಿಪಿ–16** ಎಂದು ಗುರುತಿಸಲಾಯಿತು.

8. ನಂತರ ನನ್ನ ಪದನ್ನೋತಿ ವರ್ಗಾವಣೆ ಕಾರಣ ಮುಂದಿನ ತನಿಖೆಯನ್ನು ಫ್ರಾಸಾ–5 ರವರಿಗೆ ಹಸ್ತಾಂತರಿಸಿರುತ್ತೇನೆ.

**ಪಾಟೀಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಜಿ.ಆರ್.ಎಸ್ ರವರಿಂದ**

9. ನಾನು ನನ್ನ ತನಿಖಾ ಕಾಲದಲ್ಲಿ ಘಟನಾ ಸ್ಥಳಕ್ಕೆ ಹೋಗಿರುವುದಿಲ್ಲ . ಸ್ಥಳಕ್ಕೆ ಹೋಗುವ ಅವಶ್ಯಕತೆ ಕಾಣದ ಕಾರಣ ಸ್ಥಳಕ್ಕೆ ಹೋಗಿರುವುದಿಲ್ಲ. ನಾನು ಯಾವುದೇ ಸಾಕ್ಷಿದಾರರ ಹೇಳಿಕೆಗಳನ್ನು ದಾಖಲಿಸಿಲ್ಲ ಹಾಗೂ ಈ ಪ್ರಕರಣದ ತನಿಖೆ ಕೈಗೊಳ್ಳದ ಕಾರಣ ಸ್ಥಳಕ್ಕೆ ಭೇಟಿ ಮಾಡಿಲ್ಲ ಎಂದರೆ ಸರಿಯಲ್ಲ. ಮು.ಮಾ .2 ಕ್ಕೂ, ಆರೋಪಿಗೂ ಹಾಗೂ ಈ ಪ್ರಕರಣಕ್ಕೂ ಸಂಬಂಧವಿಲ್ಲ ಎಂದರೆ ಸರಿಯಲ್ಲ . ನಾನು ಮಾದರಿ ಗಾಂಜಾವನ್ನು FSL ಪರೀಕ್ಷೆಗೆ ಕಳುಹಿಸಿದ್ದೇನೆ ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೊಪಿಗೂ, ಈ ಪ್ರಕರಣಕ್ಕೂ ಸಂಬಂದವಿಲ್ಲದಿದ್ದರೂ ಸುಳ್ಳು ಪ್ರಕರಣವನ್ನು ದಾಖಲಿಸಿ ಸುಳ್ಳು ಸಾಕ್ಷ್ಯಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.

Sd/-

**(ಟಿ. ಪಿ. ರಾಮಲಿಂಗೆ ಗೌಡ)**
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಬಳ್ಳಾಪುರ.